

ಭಾರತದ **ಪ್ರಥಮ AI** ನಗರ

# ಜಿಬಿಐಟಿ

## ಗ್ರೇಟರ್ ಬೆಂಗಳೂರು ಇನೋವೇಶನ್ ಅಂಡ್ ಟೆಕ್ ಸಿಟಿ

ಬೆಂಗಳೂರಿನ ಭವಿಷ್ಯಕ್ಕಾಗಿ ಭವಿಷ್ಯಮುಖಿ ದೃಷ್ಟಿಯ ಪ್ರತೀಕವಾಗಿರಲಿದೆ. ಉದ್ಯಮ, ವಸತಿ ಮತ್ತು ಸಾಮಾಜಿಕ ವಲಯಗಳನ್ನು ಏಕೀಕರಿಸುವ ಮೂಲಕ, ಮುಂದಿನ ಪೀಳಿಗೆಗೆ ಜೀವನವನ್ನು ಸಮೃದ್ಧಗೊಳಿಸುವ ಸ್ವಾವಲಂಬಿ ಪರಿಸರ ವ್ಯವಸ್ಥೆಯನ್ನು ನಿರ್ಮಿಸಲಿದೆ. ಸರ್ವರ ಸಮನ್ವಯದೊಂದಿಗೆ ಅಭಿವೃದ್ಧಿಗೆ ಹೆಚ್ಚಿನ ಒತ್ತು ನೀಡುವ ಮೂಲಕ, ರೈತರೂ ಪ್ರಗತಿಯ ಗೌರವಾನ್ವಿತ ಸಹಭಾಗಿಗಳಾಗಿರುತ್ತಾರೆ. ಸೂಕ್ತವಾಗಿ ಯೋಜಿಸಲ್ಪಟ್ಟ ಈ ನಗರ, ಸಮಗ್ರ ನಗರ ಜೀವನಕ್ಕೆ ಹೊಸ ಅರ್ಥ ನೀಡುತ್ತಾ, ಈ ಪ್ರದೇಶದ ಬೆಳವಣಿಗೆ ಮತ್ತು ಸಮೃದ್ಧಿಗೆ ಮಹತ್ವದ ಕೊಡುಗೆಯನ್ನು ನೀಡಲಿದೆ.

" GBIT ಹೊಸ ತಲೆಮಾರಿನ ಆಕಾಂಕ್ಷೆಗಳನ್ನು ಪ್ರತಿಬಿಂಬಿಸುತ್ತದೆ. ಎಲ್ಲರನ್ನೂ ಒಳಗೊಂಡು, ಸುಸ್ಥಿರತೆ ಮತ್ತು ಗೌರವದೊಂದಿಗೆ ಅವರ ಭವಿಷ್ಯವನ್ನು ರೂಪಿಸುವುದು ನಮ್ಮ ಬದ್ಧತೆಯಾಗಿದೆ "

**ಶ್ರೀ ಡಿ.ಕೆ. ಶಿವಕುಮಾರ್**
ಮಾನ್ಯ ಉಪಮುಖ್ಯಮಂತ್ರಿಗಳು,
ಕರ್ನಾಟಕ ಸರ್ಕಾರ

**ಹೆಚ್ಚಿನ ಮಾಹಿತಿಗಾಗಿ ಭೇಟಿ ನೀಡಿ**
bmrda.karnataka.gov.in

/GBITOfficial



**ಶ್ರೀ ಸಿದ್ದರಾಮಯ್ಯ**
ಸನ್ಮಾನ್ಯ ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ

BMRDA

ಭಾರತದ **ಪ್ರಥಮ AI** ನಗರ

# ಜಿಬಿಐಟಿ

**ವರ್ಕ್ ▸ ಲಿವ್ ▸ ಪ್ಲೇ**



**ನಗರ ಜೀವನಶೈಲಿಯ**
ಮರುವ್ಯಾಖ್ಯಾನ

**ಗ್ರೇಟರ್ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ**
ಒಂದು ವಿನೂತನ ಪರಿಕಲ್ಪನೆ

ಭಾರತದ **ಪ್ರಥಮ AI** ನಗರ

# ಜಿಬಿಐಟಿ

## ಕೆಲಸ (WORK)

## ಗ್ರೇಟರ್ ಬೆಂಗಳೂರಿನ
## ಉದ್ಯಮದ ನೆಲೆ

GBIT ಪರಿಪೂರ್ಣ ಅಭಿವೃದ್ಧಿ ಮತ್ತು ಭವಿಷ್ಯಕ್ಕೆ ಸಿದ್ಧವಾದ ಹೂಡಿಕೆ ತಾಣವಾಗಲಿದೆ.

- ಇದರ ಹೃದಯ ಭಾಗದಲ್ಲಿ, ದಕ್ಷಿಣ ಬೆಂಗಳೂರಿನ ಹೊಸ ಸೆಂಟ್ರಲ್ ಬಿಸಿನೆಸ್ ಡಿಸ್ಟ್ರಿಕ್ಟ್ ಇರಲಿದ್ದು , ಇದನ್ನು ಜಾಗತಿಕ ಮಾನದಂಡಗಳಿಗೆ ತಕ್ಕಂತೆ ವಿನ್ಯಾಸಗೊಳಿಸಿ, ಉದ್ಯಮ ಸ್ನೇಹಿಯಾಗಿ ನಿರ್ಮಿಸಲಾಗುತ್ತದೆ.
- ಸ್ಮಾರ್ಟ್ ಯೋಜನೆ, ಭವಿಷ್ಯಮುಖಿ ಮೂಲಸೌಕರ್ಯ ಮತ್ತು “ವಾಕ್-ಟು-ವರ್ಕ್” ಪರಿಸರದೊಂದಿಗೆ, GBIT ತಂತ್ರಜ್ಞಾನ, ಕೈಗಾರಿಕೆ ಮತ್ತು ಸೇವಾ ಕ್ಷೇತ್ರಗಳಲ್ಲಿ ಭಾರಿ ಪ್ರಮಾಣದ ಉದ್ಯೋಗಾವಕಾಶಗಳನ್ನು ಸೃಷ್ಟಿಸಲಿದೆ.

**ಯೋಜಿತ ಅಭಿವೃದ್ಧಿ ಮತ್ತು ಆರ್ಥಿಕ ಚಟುವಟಿಕೆಗಳ ಮರುವಿಂಗಡಣೆಯ ಮೂಲಕ GBIT ಯು ಬೆಂಗಳೂರು ನಗರದ ಮೇಲಿನ ಜನಸಂಖ್ಯೆಯ ಒತ್ತಡವನ್ನು ಕಡಿಮೆ ಮಾಡುತ್ತದೆ**

## ಬದುಕು (LIVE)

### GBIT ಎಂದರೆ
### ನಾಳೆಯ ಬದುಕಿನ ರೂಪ

- ಇಲ್ಲಿನ ವಸತಿ ವಲಯಗಳಲ್ಲಿ ಆಧುನಿಕ ಶಾಲೆಗಳು, ಮಲ್ಟಿ-ಸ್ಪೆಷಾಲಿಟಿ ಆಸ್ಪತ್ರೆಗಳು, ಸರ್ಕಾರಿ ಸೇವಾ ಕೇಂದ್ರಗಳು, ಹಸಿರು ಉದ್ಯಾನಗಳು ಮತ್ತು ಮನರಂಜನಾ ಸ್ಥಳಗಳು ಇರಲಿದ್ದು , ಅಗತ್ಯವಿರುವ ಎಲ್ಲವೂ ಸುಲಭವಾಗಿ ದೊರೆಯುತ್ತದೆ. AI ಆಧಾರಿತ ಸೇವೆಗಳು ದಿನನಿತ್ಯದ ಜೀವನವನ್ನು ಇನ್ನಷ್ಟು ವೇಗವಾಗಿ, ಸರಳವಾಗಿ ಮತ್ತು ಪರಿಣಾಮಕಾರಿಯಾಗಿ ಮಾಡುತ್ತವೆ.
- ಶಾಲೆಗಳು, ಅಂಗನವಾಡಿಗಳು, ಪ್ರಾಥಮಿಕ ಆರೋಗ್ಯ ಕೇಂದ್ರಗಳು, ನಿರಂತರ ನೀರು ಮತ್ತು ವಿದ್ಯುತ್ ಪೂರೈಕೆ, ಟೆಂಡರ್‌ಶೂರ್ ರಸ್ತೆ ಹಾಗೂ ಮಾರುಕಟ್ಟೆ ಸಂಪರ್ಕ ಇತ್ಯಾದಿ ಸೌಲಭ್ಯಗಳು ಒಟ್ಟಾಗಿ ಜೀವನದ ಮಟ್ಟವನ್ನು ಹೆಚ್ಚಿಸುತ್ತವೆ. ಶುದ್ಧ ಗಾಳಿ, ಹಸಿರು ವಾತಾವರಣ ಮತ್ತು ವಾಕಿಂಗ್ ಪಥಗಳ ವಿನ್ಯಾಸದೊಂದಿಗೆ, ನಗರ ವಾತಾವರಣದಲ್ಲೇ ಪ್ರಕೃತಿಯೊಡನೆ ಬದುಕುವ ಅಪರೂಪದ ಅವಕಾಶವನ್ನು GBIT ಒದಗಿಸುತ್ತದೆ.

## ಉಲ್ಲಾಸ (PLAY)

### ಬೆಂಗಳೂರಿನ
### ನೂತನ ಕ್ರೀಡಾ ಮತ್ತು ಸಾಂಸ್ಕೃತಿಕ ನೆಲೆ

- GBIT ಯು ಇಲ್ಲಿನ ಪುನರುಜ್ಜೀವನಗೊಂಡ ಕೆರೆಗಳಲ್ಲಿ ಕ್ರೀಡಾ ಚಟುವಟಿಕೆಗಳಿಂದ ಹಿಡಿದು ಸಾರ್ವಜನಿಕ ಉದ್ಯಾನಗಳು, ಮಾರುಕಟ್ಟೆಗಳು ಮತ್ತು ಜನರನ್ನು ಒಗ್ಗೂಡಿಸುವ ಸಾಂಸ್ಕೃತಿಕ ವೇದಿಕೆಗಳವರೆಗೆ ಹಲವು ಮನರಂಜನಾ ಸ್ಥಳಗಳನ್ನು ಒದಗಿಸುತ್ತದೆ.
- ಇಲ್ಲಿ ಅಂತಾರಾಷ್ಟ್ರೀಯ ಕ್ರಿಕೆಟ್ ಕ್ರೀಡಾಂಗಣ, ಒಲಿಂಪಿಕ್ ಗುಣಮಟ್ಟದ ತರಬೇತಿ ಕೇಂದ್ರಗಳು, ಬಹು-ಕ್ರೀಡಾ ಅಂಗಳಗಳು ಹಾಗೂ ಹೊಸ ಪ್ರತಿಭೆಯನ್ನು ಬೆಳೆಸುವ ಸೌಲಭ್ಯಗಳನ್ನು ಒಳಗೊಂಡ ವಿಶಿಷ್ಟ ಕ್ರೀಡಾ ಮೂಲಸೌಕರ್ಯವೂ ಇರಲಿದೆ.





## ಸುಸ್ಥಿರ ಅಭಿವೃದ್ಧಿ

## ಝೀರೋ-ಕಾರ್ಬನ್, ಝೀರೋ-ವೇಸ್ಟ್ ಝೀರೋ-ಟ್ರಾಫಿಕ್ ಮಾದರಿ

ಹಸಿರು ನಗರವಾಗಿ ರೂಪಿತವಾಗಿರುವ GBIT, ಪರಿಣಾಮಕಾರಿ ನೀರು ನಿರ್ವಹಣೆ, ಜವಾಬ್ದಾರಿಯುತ ನಿರ್ಮಾಣ ಮತ್ತು ಸುಸ್ಥಿರ ಇಂಧನ ಶಕ್ತಿಯ ಜಾಗೃತಿಯುತ ಯೋಜನೆ ಹೊಂದಿರುತ್ತದೆ. ಸಾರ್ವಜನಿಕ ಉದ್ಯಾನಗಳು, ವಾಕಿಂಗ್ ಪಥಗಳು ಮತ್ತು ಸೈಕಲ್ ಸ್ನೇಹಿ ವಿನ್ಯಾಸವು ಮಾಲಿನ್ಯವನ್ನು ಕಡಿಮೆ ಮಾಡಿ, ಪರಿಸರದ ಮೇಲಿನ ಒತ್ತಡವನ್ನು ತಗ್ಗಿಸಿ, ದಿನನಿತ್ಯದ ಬದುಕನ್ನು ಉತ್ತಮಗೊಳಿಸುತ್ತದೆ.

## ಸಂಪರ್ಕ

### ಅತ್ಯುತ್ತಮ ಸಂಪರ್ಕ ಸೌಲಭ್ಯಗಳು

### ರಸ್ತೆ

- NH-275 ಮತ್ತು NH-209 ಹೆದ್ದಾರಿಗಳಿಗೆ ನೇರ ಸಂಪರ್ಕ
- ನೈಸ್ ಮತ್ತು ಸ್ಯಾಟಲೈಟ್ ಟೌನ್ ರಿಂಗ್ ರಸ್ತೆ (STRR)ಗೆ ನೇರ ಸಂಪರ್ಕ
- ಬೆಂಗಳೂರು ಬಿಸಿನೆಸ್ ಕಾರಿಡಾರ್‌ಗೆ ನೇರ ಸಂಪರ್ಕ

### ರೈಲು

- ಕೇವಲ 6 ಕಿಮೀ ದೂರದಲ್ಲಿರುವ ಬಿಡದಿ ರೈಲು ನಿಲ್ದಾಣ
- ಪ್ರಸ್ತಾಪಿತ ಉಪನಗರ ರೈಲು ಜಾಲಕ್ಕೆ ಸಮೀಪ

### ಮೆಟ್ರೋ

- ಮೆಟ್ರೋ ಹಂತ–3 ವಿಸ್ತರಣೆ ಮಾರ್ಗಗಳಿಗೆ ಹತ್ತಿರ

### ವಿಮಾನ ನಿಲ್ದಾಣ

- ವಿಮಾನ ನಿಲ್ದಾಣಕ್ಕೆ ತಡೆರಹಿತ ಸಂಪರ್ಕ

**ವಿಶಾಲ ರಸ್ತೆ ಹಾಗೂ ಬಹುಮಾಧ್ಯಮ ಸಾರಿಗೆ ವ್ಯವಸ್ಥೆಯೊಂದಿಗೆ, ತಡೆರಹಿತ ವಾಹನ ಸಂಚಾರಕ್ಕೆ ಅನುಗುಣವಾಗಿ ವಿನ್ಯಾಸಗೊಳಿಸಲಾಗಿದೆ**



## ಭಾರತದ ಮೊಟ್ಟ ಮೊದಲ ಮತ್ತು ಅತಿದೊಡ್ಡ AI ಸಿಟಿ

ಗ್ರೇಟರ್ ಬೆಂಗಳೂರು ಇನೋವೇಶನ್ ಅಂಡ್ ಟೆಕ್ ಸಿಟಿ (GBIT) ಕರ್ನಾಟಕದ ಮೊದಲ ಸಮಗ್ರ, AI-ಸಂಯೋಜಿತ ಟೌನ್‌ಶಿಪ್ ಆಗಿ ಯೋಜಿತಗೊಂಡಿದ್ದು, ಸುಸ್ಥಿರ, ಸಮನ್ವಯ ಮತ್ತು ತಂತ್ರಜ್ಞಾನ ಆಧಾರಿತ ನಗರ ಅಭಿವೃದ್ಧಿಯಲ್ಲಿ ಹೊಸ ಮಾನದಂಡಗಳನ್ನು ರೂಪಿಸಲಿದೆ.

### ಮುಖ್ಯಾಂಶಗಳು

- ಭೂ ಮಾಲೀಕರೇ ಪಾಲುದಾರ ಮಾದರಿ – ಸಮಾನತೆ ಮತ್ತು ಪಾಲ್ಗೊಳ್ಳುವಿಕೆಯನ್ನು ಖಚಿತಪಡಿಸಿ, ಪ್ರತಿಯೊಬ್ಬ ಪಾಲುದಾರನನ್ನೂ ಈ ಭವಿಷ್ಯಮುಖಿ ನಗರದ ಸಹ-ನಿರ್ಮಾತೃವನ್ನಾಗಿ ಮಾಡುತ್ತದೆ.
- 950 ಎಕರೆ ಪ್ರದೇಶ – ಕೆರೆಗಳು, ಜಲಮೂಲಗಳು ಮತ್ತು ಹಸಿರು ಬಫರ್‌ಗಳಿಗೆ ಮೀಸಲಿಟ್ಟು, ಪರಿಸರ ಸಮತೋಲನಕ್ಕಾಗಿ ಮೂಲಭೂತ ನೀಲಿ–ಹಸಿರು ಸಂಪತ್ತನ್ನು ಸಂರಕ್ಷಿಸುತ್ತದೆ.
- ವರ್ಕ್–ಲಿವ್–ಪ್ಲೇ ತತ್ವ – ಆರೋಗ್ಯಕರ, ಸಮನ್ವಯಿತ ಮತ್ತು ವೈವಿಧ್ಯಮಯ ಸಮುದಾಯಗಳನ್ನು ನಿರ್ಮಿಸಲು ರೂಪಿಸಲಾಗಿದೆ.
- ಗ್ರೇಟರ್ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ(GBDA)ದಡಿ – GBITಯು ಬೆಂಗಳೂರು ನಗರದ ಸಂಚಾರ ಒತ್ತಡವನ್ನು ತಗ್ಗಿಸಿ, ಸಮಾನ ಬೆಳವಣಿಗೆಗೆ ದಾರಿ ಮಾಡಿಕೊಟ್ಟು , ಪರಿಸರ ಸಂವೇದನಾಶೀಲ ಮತ್ತು ಆರ್ಥಿಕವಾಗಿ ವೈವಿಧ್ಯಮಯ ಟೌನ್‌ಶಿಪ್‌ಗಳಿಗೆ ವಿಶಿಷ್ಟ ಮಾದರಿಯಾಗಲಿದೆ.




- ಪರಿಣಾಮಕಾರಿ ಉಪಯೋಗಗಳು ಮತ್ತು ಸೇವೆಗಳಿಗಾಗಿ ಸ್ವಯಂಚಾಲಿತ ವ್ಯವಸ್ಥೆಗಳು.
- ಮೂಲಸೌಕರ್ಯ, ಲಾಜಿಸ್ಟಿಕ್ಸ್ ಮತ್ತು ನಿರ್ವಹಣೆಗಾಗಿ ರೊಬೊಟಿಕ್ಸ್ ಹಾಗು ಆಟೋಮೇಷನ್ ತಂತ್ರಜ್ಞಾನ ಬಳಕೆ.
- ಪಾರದರ್ಶಕತೆ ಮತ್ತು ನಾಗರಿಕ ಕೇಂದ್ರೀಕೃತ ಆಡಳಿತಕ್ಕಾಗಿ AI ಆಧಾರಿತ ಆಡಳಿತ ಸಾಧನಗಳು.
- ನೀರು, ಇಂಧನ ಶಕ್ತಿ, ಸಂಚಾರ ಮತ್ತು ತ್ಯಾಜ್ಯ ವ್ಯವಸ್ಥೆಗಳ ನೈಜ-ಕಾಲದ ನಿರ್ವಹಣೆಗಾಗಿ IoT ಸಂವೇದಕ ಜಾಲಗಳು.
- ಪೂರ್ವಯೋಜನೆ ಆಧಾರಿತ ಆಪತ್ತು ನಿರ್ವಹಣೆ ಮತ್ತು ನಿರಂತರ ಸುಧಾರಣೆಗಾಗಿ ಡಿಜಿಟಲ್ ಟ್ವಿನ್ ತಂತ್ರಜ್ಞಾನ.



# ಬೈರಮಂಗಲ ಕೆರೆ
## ಪುನರುಜ್ಜೀವನ

ಬೆಂಗಳೂರು ಪಶ್ಚಿಮಕ್ಕೆ ಸುಮಾರು 30 ಕಿಮೀ ದೂರದಲ್ಲಿ, ಬೆಂಗಳೂರು ದಕ್ಷಿಣ ಜಿಲ್ಲೆಯ ಬಿಡದಿ ಹೋಬಳಿಯಲ್ಲಿ ಇರುವ ಬೈರಮಂಗಲ ಕೆರೆ, ವೃಷಭಾವತಿ ನದಿಯಿಂದ ನೀರು ಶೇಖರಿಸುವ ಪ್ರಮುಖ ಜಲಮೂಲವಾಗಿದೆ. ಒಮ್ಮೆ ಸ್ವಾಭಾವಿಕ ನದಿಯಾಗಿದ್ದ ವೃಷಭಾವತಿ, ಇಂದಿಗೆ ಗೃಹ ಹಾಗೂ ಕೈಗಾರಿಕಾ ಮಾಲಿನ್ಯವನ್ನು ತುಂಬಿಕೊಂಡಿದೆ – ಇದು ಸವಾಲುಗಳಿಂದ ಕೂಡಿದ್ದರೂ, ಪುನರುಜ್ಜೀವನಕ್ಕೆ ಅವಕಾಶವಿದೆ.

ಬೈರಮಂಗಲ ಕೆರೆಯ ಪುನರುಜ್ಜೀವನದ ಉದ್ದೇಶ, ನೀರಿನ ಗುಣಮಟ್ಟವನ್ನು ಸುಧಾರಿಸುವುದು, ಭವಿಷ್ಯದ ಮಾಲಿನ್ಯವನ್ನು ತಡೆಯುವುದು ಹಾಗೂ ಕೆರೆಯ ಪರಿಸರ ಸಮತೋಲನವನ್ನು ಪುನಃ ಸ್ಥಾಪಿಸುವುದಾಗಿದೆ. ತ್ಯಾಜ್ಯ ಶುದ್ಧೀಕರಣ, ಮಾಲಿನ್ಯ ನಿಯಂತ್ರಣ ಮತ್ತು ಪರಿಸರ ಪುನರುಜ್ಜೀವನದಂತಹ ಯೋಜಿತ ಕ್ರಮಗಳ ಮೂಲಕ, ಈ ಕೆರೆ ಆರೋಗ್ಯಕರ ಹಾಗೂ ವೈವಿಧ್ಯಮಯ ಪ್ರದೇಶದ ಒಂದು ಮುಖ್ಯ ಅಂಗವಾಗಿ ರೂಪುಗೊಳ್ಳಲಿದೆ. ಪುನರುಜ್ಜೀವನಗೊಂಡ ಜಲಮೂಲಗಳು ಕೆರೆ ಮತ್ತು ನದಿ ತೀರದಲ್ಲಿನ ವೈವಿಧ್ಯಮಯ ಚಟುವಟಿಕೆಗಳ ತಾಣಗಳಾಗಿ ಪರಿವರ್ತನೆಗೊಳ್ಳಲಿವೆ.

### ಪುನರುಜ್ಜೀವನದ ಪ್ರಮುಖ ಅಂಶಗಳು

- ಮಾಲಿನ್ಯ ನಿಯಂತ್ರಣ: ಬೈರಮಂಗಲ ಕೆರೆಗೆ ಶುದ್ಧೀಕರಿಸದ ಒಳಚರಂಡಿ ಮತ್ತು ಕೈಗಾರಿಕಾ ತ್ಯಾಜ್ಯ ಹೆಚ್ಚಿನ ಪ್ರಮಾಣದಲ್ಲಿ ಸೇರುತ್ತಿದ್ದು , ಗಂಭೀರ ಜಲ ಮಾಲಿನ್ಯಕ್ಕೆ ಕಾರಣವಾಗಿದೆ.
- ಒಳಚರಂಡಿ ಶುದ್ಧೀಕರಣ: ಈಗಿರುವ ಒಳಚರಂಡಿ ಶುದ್ಧೀಕರಣ ಘಟಕಗಳನ್ನು ಸುಧಾರಿಸಿ, ಹೊಸ ಮೂರು ಹಂತಗಳ ಶುದ್ಧೀಕರಣ ಸೌಲಭ್ಯಗಳನ್ನು ಸ್ಥಾಪಿಸುವುದು ಅವಶ್ಯಕ. ಇದರಿಂದ ಶುದ್ಧೀಕರಿಸದ ಒಳಚರಂಡಿ ನೀರು ಕೆರೆಯಲ್ಲಿ ಸೇರುವುದನ್ನು ತಡೆಯಬಹುದು.
- ಕೈಗಾರಿಕಾ ತ್ಯಾಜ್ಯ ನಿಯಂತ್ರಣ: ಕೈಗಾರಿಕಾ ತ್ಯಾಜ್ಯವನ್ನು ನಿಯಮಿತವಾಗಿ ನಿಗಾದಲ್ಲಿ ಇಟ್ಟು , ಪರಿಸರ ನಿಯಮಗಳಿಗೆ ಅನುಗುಣವಾಗಿ ನಿಯಂತ್ರಿಸುವುದು ಅಗತ್ಯ.
- ವೃಷಭಾವತಿ ನದಿ ಪುನರುಜ್ಜೀವನ: ಬೈರಮಂಗಲ ಕೆರೆಗೆ ಸೇರುವ ವೃಷಭಾವತಿ ನದಿ ತೀವ್ರವಾಗಿ ಮಾಲಿನ್ಯಗೊಂಡಿದೆ. ನದಿಯ ಆರೋಗ್ಯವನ್ನು ಪುನರುಜ್ಜೀವನಗೊಳಿಸುವುದು ಕೆರೆಯ ನೀರಿನ ಗುಣಮಟ್ಟ ಸುಧಾರಣೆಗೆ ಅತ್ಯವಶ್ಯಕ.
- ಅತಿಕ್ರಮಣ ತೆರವು: ಕೆರೆಯ ಸುತ್ತಮುತ್ತಲಿನ ಅಕ್ರಮ ನಿರ್ಮಾಣಗಳು ಮತ್ತು ಅತಿಕ್ರಮಣಗಳನ್ನು ತೆರವುಗೊಳಿಸುವುದು, ಅದರ ಸ್ವಾಭಾವಿಕ ಗಡಿಗಳನ್ನು ಹಾಗೂ ನೀರು ಸಂಗ್ರಹ ಸಾಮರ್ಥ್ಯವನ್ನು ಕಾಪಾಡಲು ಅಗತ್ಯ.
- ಸಸ್ಯವರ್ಗ ಮತ್ತು ಸ್ವಾಭಾವಿಕ ಪ್ರಕ್ರಿಯೆಗಳು: ಸ್ವಾಭಾವಿಕ ಸಸ್ಯವರ್ಗದ ಬೆಳವಣಿಗೆಯನ್ನು ಉತ್ತೇಜಿಸಿ, ತೇವಭೂಮಿಯ ಪುನರುಜ್ಜೀವನದಂತಹ ಪರಿಸರ ಪ್ರಕ್ರಿಯೆಗಳನ್ನು ಜಾರಿಗೆ ತರುವುದರಿಂದ ಕೆರೆಯ ನೀರು ಸ್ವಾಭಾವಿಕವಾಗಿ ಶುದ್ಧವಾಗಲು ಸಹಾಯವಾಗುತ್ತದೆ.
- ಸಾರ್ವಜನಿಕ ಜಾಗೃತಿ ಮತ್ತು ಶಿಕ್ಷಣ: ಕೆರೆ ಸಂರಕ್ಷಣೆಯ ಮಹತ್ವ ಹಾಗೂ ಜವಾಬ್ದಾರಿಯುತ ತ್ಯಾಜ್ಯ ನಿರ್ವಹಣೆಯ ಅಗತ್ಯವನ್ನು ಜನರಲ್ಲಿ ಜಾಗೃತಿಗೊಳಿಸುವುದು, ದೀರ್ಘಕಾಲಿಕ ಸುಸ್ಥಿರತೆಗೆ ನೆರವಾಗುತ್ತದೆ.





# ಪ್ರಗತಿಯ ಕೇಂದ್ರಬಿಂದುಗಳಾಗಿ
## ಗ್ರಾಮಗಳು

GBIT ವ್ಯಾಪ್ತಿಯಲ್ಲಿನ ಗ್ರಾಮಗಳು ತಮ್ಮ ಸಾಂಸ್ಕೃತಿಕ ಮತ್ತು ಐತಿಹಾಸಿಕ ವೈಶಿಷ್ಟ್ಯತೆಯನ್ನು ಉಳಿಸಿಕೊಂಡೇ, ಭವಿಷ್ಯಮುಖಿ ನಗರ ದೃಷ್ಟಿಯ ಭಾಗವಾಗುತ್ತವೆ.

**ದೈನಂದಿನ ಜೀವನ, ಹೊಸ ಎತ್ತರಕ್ಕೆ**
ನಿವಾಸಿಗಳಿಗೆ ಲಭ್ಯವಾಗುವ ಸೌಲಭ್ಯಗಳು:

- ವಿಶ್ವಮಟ್ಟದ ಆರೋಗ್ಯ ಸೇವೆಗಳು
- ಗುಣಮಟ್ಟದ ಶಿಕ್ಷಣ
- ಸ್ವಚ್ಛ ಕುಡಿಯುವ ನೀರು
- ವಿಶ್ವಾಸಾರ್ಹ ವಿದ್ಯುತ್ ಪೂರೈಕೆ
- ಸರ್ವ ಋತು ಸಂಪರ್ಕ ಸೌಲಭ್ಯ

**ಅವಕಾಶಗಳು ನಿಮ್ಮ ಮನೆ ಬಾಗಿಲಿಗೆ**
ಈ ಪರಿವರ್ತನೆಯಿಂದ:

- ಸ್ಥಳೀಯ ಉದ್ಯೋಗಾವಕಾಶಗಳ ಸೃಷ್ಟಿ
- ಸುಗಮ ಸಂಚಾರ ವ್ಯವಸ್ಥೆ
- ಸ್ಮಾರ್ಟ್ ಸಾರ್ವಜನಿಕ ಸೇವೆಗಳು
- ಏಕೀಕೃತ ಮೂಲಸೌಕರ್ಯ

# ರೈತರೊಂದಿಗೆ
## ಸಹಭಾಗಿತ್ವ

GBIT ನಲ್ಲಿ, ರೈತರು ಪ್ರಗತಿಯ ಸಹಯಾತ್ರಿಗಳಾಗಿ, ಈ ಹೊಸ ಅಭಿವೃದ್ಧಿಯ ದೃಷ್ಟಿ , ಯೋಜನೆ ಮತ್ತು ಸಮೃದ್ಧಿಯ ಭಾಗವಾಗಿರುತ್ತಾರೆ.

- ಪ್ರತಿಯೊಬ್ಬ ರೈತನಿಗೂ ಅಭಿವೃದ್ಧಿಪಡಿಸಿದ ಭೂಮಿ ಅಥವಾ ನ್ಯಾಯಸಮ್ಮತ ಪರಿಹಾರ ನೀಡಲಾಗುತ್ತದೆ.
- ಭೂ ದಾಖಲೆಗಳನ್ನು ಡಿಜಿಟಲೀಕರಿಸಿ, ಸಮೀಕ್ಷಾ ದೋಷಗಳನ್ನು ಸರಿಪಡಿಸಿ, ಖಾತಾ ಪ್ರಕ್ರಿಯೆಯನ್ನು ಸುಗಮಗೊಳಿಸಲಾಗುತ್ತದೆ.





ಇಲ್ಲಿವರೆಗೂ ರೂಪಿಸಲಾದ ಅತಿದೊಡ್ಡ ಪುನರ್ವಸತಿ–ಪರಿಹಾರ ನೀತಿ, ಎಲ್ಲರನ್ನು ಒಳಗೊಂಡ, ಗೌರವಯುತ ಹಾಗೂ ಭವಿಷ್ಯಮುಖಿ ಅಭಿವೃದ್ಧಿಯನ್ನು ಖಚಿತಪಡಿಸುತ್ತದೆ.